# ಹೇಳಿ ಹೋಗು ಕಾರಣ...

ಮಾಗಿಯ ಛಳಿಯಲ್ಲಿ ಕಷ್ಟಪಟ್ಟು ಅರಳಿದ ಮಲ್ಲಿಗೆಯ ಮೊಗ್ಗೊಂದು ಛಳಿಯ ಭರಿಸಲಾಗದೇ ಅರಳುವ ಮುನ್ನವೇ ಉದುರಿದಂತೆ, ಯಾಕೆ ಹೀಗೆ ಮಾಡಿದೆ ಗೆಳತಿ? ಬದುಕು ಅರಳುವ ಮುನ್ನವೇ ನನ್ನನ್ನೇಕೆ ಈ ವಿಷಾದಯೋಗದೊಳಕ್ಕೆ ದೂಡಿಬಿಟ್ಟೆ? ನನ್ನೊಂದಿಗಿನ ಬದುಕು ಅಷ್ಟೊಂದು ಅಸಹನೀಯವಾಯಿತೇ?

ನಾವಿಬ್ಬರೂ ನಮ್ಮ ಸಿಹಿ ಸ್ವಾರ್ಥಕ್ಕೋಸ್ಕರ ತೆಗೆದುಕೊಂಡ ನಿರ್ಧಾರವೇ ತಾನೇ ಈ ಮದುವೆ? ಇದರಲ್ಲಿ ಯಾರ ತ್ಯಾಗವೇನು ಬಂತು? ನೀನು ನಿನ್ನಪ್ಪ ಅಮ್ಮನನ್ನು ಬಿಟ್ಟು ಬಂದದ್ದು ತ್ಯಾಗವೇ ಆದರೂ ಅವರು ನಮ್ಮಿಬ್ಬರ ಮಿಲನ ನಂತರವಾದರೂ ಒಪ್ಪಿದ್ದಿದ್ದರೆ ನೀನೆಷ್ಟು ಖುಷಿ ಪಡುತಿದ್ದೆಯೋ? ಆದರೇನು ಮಾಡಲಿ, ಅವರು ನಿನ್ನಪ್ಪ ಅಮ್ಮ; ನಿನ್ನಲ್ಲಿರುವ ಹಠ ಅವರಲ್ಲಿ ಅಂಕುರವೊಡೆದದ್ದೇ ತಾನೇ? ನನ್ನಪ್ಪ-ಅಮ್ಮನದು ಬಿಡು, ಅವರದು ಮೌನ ಸಮ್ಮತಿ; ತಲೆಯ ಮೇಲೆರೆಡು ಅಕ್ಷತೆ ಹಾಕಲಿಲ್ಲ, ಮನೆಯೊಳಕ್ಕೆ ನಡೆದು ಬಂದವಳನ್ನು ಸೊಸೆಯೆಂದರು, ಸಂತಸದಲ್ಲಿ ಕಣ್ಣೀರಾದರು. ಅವರೆಲ್ಲರನ್ನು ಅಲ್ಲಲ್ಲೇ ಬಿಟ್ಟು, ಈ ನಗರಿಯಲ್ಲಿ ನನಗೆ-ನೀನು ನಿನಗೆ-ನಾನಾಗಿದ್ದೆವು ತಾನೇ? ಎಲ್ಲಿಂದ ಹುಟ್ಟಿತು ಈ ಬಿರುಕು?

ಇಳಿ ಸಂಜೆಯ ಹೊತ್ತಿನಲ್ಲಿ ನನ್ನ ಬೆನ್ನೊರಗಿ ಬೈಕಿನಲ್ಲಿ ಕುಳಿತವಳಿಗೆ ಸುತ್ತಾಟ ಮುಗಿಯುವಷ್ಟರಲ್ಲಿ ನಾಲ್ಕು-ನಾಲ್ಕು ಐಸ್‌ಕ್ರೀಮುಗಳು; ಜಯನಗರದ ಮೂಲೆಯ ಕಾರ್ನರ್‌ಹೌಸಿನ ಚಾಕೊಲೆಟ್ ಮೌಸಿ, ಮುಂದೆ ಫುಡ್‌ವರ್ಲ್ಡ್‌ನಲ್ಲಿ ಅಮುಲ್ ಚಾಕೋಬಾರ್, ಕೂಲ್ ಜಾಯಿಂಟ್‌ನಲ್ಲೊಂದು ಸಾಫ್ಟಿ. ನನಗೆ ನೀನು ಸಣ್ಣ ಮಗುವಿನಂತೆ ತಿನ್ನುವುದನ್ನು ಕಣ್ಣರಳಿಸಿ ನೋಡುವುದಷ್ಟೇ ಕೆಲಸ. ಮನೆಯಲೆಲ್ಲ ವಿಧವಿಧದ ಚಾಕೊಲೆಟ್‌ಗಳು; ಹಾಸಿಗೆಯ ಕೆಳಗೆ ಆಲ್ಪೈನ್‌ಲಿಬೆಗಳು, ಅಡಿಗೆ ಮನೆಯ ಮೂಲೆಯಲ್ಲಿ ಯರ್ಾಯರ್ಾ ರ‍್ಯಾವಲ್ಗನ್ಸ್, ಟೀವಿಯ ಮೇಲೆ ಟೆಂಪ್ಟೇಷನ್‌ಗಳು... ಇಷ್ಟೆಲ್ಲವಿದ್ದರೂ ನಮ್ಮ ಬದುಕಿನಲ್ಲಿ ಸಿಹಿಕಡಿಮೆಯಾಗಿಬಿಟ್ಟಿತೇನೇ? ಅದು ಭರಿಸಲಾಗದಷ್ಟು ಕಹಿಯಾಗಿಬಿಟ್ಟಿತೇನೇ?

ಮನೆಯಿಂದ ದೂರವುಳಿದು ಬೆಳೆದವನಿಗೆ ಅಮ್ಮನ ಕೈತುತ್ತು ನೀನಾಗಬೇಕೆಂದು ಹಂಬಲಿಸಿದ್ದೆ, ನನ್ನೆಲ್ಲ ದೌರ್ಬಲ್ಯಗಳಿಗೆ ನೀನು, ನಿನ್ನೆಲ್ಲವಕ್ಕೂ ನಾನು ಪೂರಕವಾಗಬೇಕೆಂದುಕೊಂಡಿದ್ದೆನಲ್ಲೇ ಹುಡುಗಿ. ನಮ್ಮಿಬ್ಬರನ್ನು ಆ ಕತ್ತಲ ಮುಂಜಾವಿನಲ್ಲಿ ಹೆಸರೇ ಇಲ್ಲದ ದೇವಸ್ಥಾನದ ಮೂರ್ತಿಯೆದುರು ಒಂದುಗೂಡಿಸಲು ಪರಿಪಾಟಲುಪಟ್ಟ ನನ್ನೆಲ್ಲ ಸ್ನೇಹಿತರು ಸ್ವಲ್ಪವಾದರೂ ಅಸೂಯೆ ಪಟ್ಟಿರಲಿಕ್ಕೂ ಸಾಕು, ಅವರ ದೃಷ್ಟಿಯೇ ತಾಕಿತೇನೇ?

ತಿಂಗಳಿಗೆರಡು ಜೊತೆ ಹೊಚ್ಚಹೊಸ ಡ್ರೆಸ್ಸುಗಳು; ನಾನೇ ಇಷ್ಟಪಟ್ಟು ಕೊಡಿಸುತ್ತಿದ್ದ (ನಿನ್ನಪ್ಪ ಅಮ್ಮ ಹಾಕಲು ಬಿಡದಿದ್ದ) ಜೀನ್ಸುಗಳು; ಅವೆಲ್ಲ ಬಳೆ-ಜಂಕ್ ಜುವೆಲ್ಲರಿಗಳು, ನನ್ನಕ್ಕ-ಅಪ್ಪಅಮ್ಮಂದಿರು ಮಾಡಿಸಿಕೊಟ್ಟ ಕಿವಿಯೋಲೆ, ಬಳೆಗಳು, ಸರ; ಚಿಟ್ಟೆಯ ಹಾಗೆ ಆಚೀಚೆ ತಿರುಗಲು ಸ್ಕೂಟಿ; ಥೇ, ಇದೆಲ್ಲ ಲೌಕಿಕವಾಯಿತೆಂದುಕೊಂಡರೆ, ಮೆಟೀರಿಯಲಿಸ್ಟಿಕ್ ಅಂದುಕೊಂಡರೆ, ಯಾವಾಗಲೂ ನಿನ್ನ ದ್ವನಿಗೆ ಕಾದು ಹ್ಯಾಪನಂತೆ ನಗುತ್ತ ನಿಂತಿರುತಿದ್ದ, ನಿನ್ನಾಜ್ಞೆಯನ್ನು ಶಿರಸಾವಹಿಸಿ ಪಾಲಿಸುತಿದ್ದ ನಾನು, ಅದನ್ನು ಪಾಲಿಸುವಂತೆ ಮಾಡುತಿದ್ದ ನನ್ನ ನಿಶ್ಪಾಪಿ ಹೃದಯ...

ಒಂದೂವರೆ ವರ್ಷದಿಂದ, ಸಾಮ-ಭೇದ-ದಂಡಾದಿ ಉಪಾಯಗಳಿಂದ ನಮ್ಮನ್ನು ಅಗಲಿಸಲೆತ್ನಿಸುತ್ತಿದ್ದ ನಿನ್ನಪ್ಪ-ಅಮ್ಮನ ಬಯಕೆ ಕೊನೆಗೂ ಫಲಿಸಿಬಿಟ್ಟಿತಲ್ಲೇ... ಬೆಳಿಗ್ಗೆ ನನ್ನನ್ನು ನಗುನಗುತ್ತ ಬೆಳಿಗ್ಗೆ ಬೀಳ್ಕೊಟ್ಟವಳು, ಮಧ್ಯಾಹ್ನದ ಹೊತ್ತಿಗೆ ಮೊಬೈಲ್ ರಿಸೀವ್ ಮಾಡಲೇ ಒಲ್ಲೆಯಲ್ಲ. ಅಷ್ಟೆಲ್ಲ ಎಸ್ಸೆಮೆಸ್‌ಗಳಿಗೆ ಎರಡೇ ಲೈನುಗಳ ಒಂದೇ ಎಸ್ಸೆಮೆಸ್ಸು... 'ಒಂದು ಇಂಟರ್‌ವ್ಯೂ ಅಟೆಂಡ್ ಮಾಡ್ತಾ ಇದೀನಿ'. ಅದೇ ಖುಷಿಯಲ್ಲಿ ಸಂಜೆ ಮನೆಗೆ ಬಂದವನನ್ನು ಸ್ವಾಗತಿಸಿದ್ದು ಮನೆಯ ಬೀಗ; ಬಾಗಿಲು ತೆರೆದು ಒಳಬಂದು ಯಥಾ ಪ್ರಕಾರ ಸೋಮಾರಿ ಸಿದ್ಧನ ಹಾಗೆ ಸೋಫಾಮೇಲೆ ಉರುಳಿಕೊಂಡು ಟೀವಿ ನೋಡುತ್ತ ಕರೆ ಮಾಡಲು ಪ್ರಯತ್ನಿಸಿದರೆ ನಿನ್ನ ಮೊಬೈಲು 'ನಾಟ್ ರೀಚೆಬಲ್'. ಒಳ ರೂಮಿನ ಹಾಸಿಗೆಯ ಮೇಲೆ 'ಜಾವಾ-೨ ಕಂಪ್ಲೀಟ್ ರೆಫೆರೆನ್ಸ್' ಮಧ್ಯದ್ಯಾವುದೋ ಪುಟ ತೆರೆದುಕೊಂಡು ಬಿದ್ದಿದೆ, ಜೊತೆಗೇ ಪೆನ್ನು-ಹಾಳೆಗಳು, 'ಇಂಟರ್‌ವ್ಯೂ ಗೆ ಸಕತ್ ಪ್ರಿಪರೇಷನ್ ನಡೆದಿತ್ತೂಂತ ಕಾಣಿಸುತ್ತೆ' ಅಂದುಕೊಂಡು ಏನೋ ಅನಿಸಿ ಕಬೋರ್ಡ್ ಬಾಗಿಲು ತೆರೆದೆ ನೋಡು, ಆಗ ಬಡಿಯಿತು, ಬರಸಿಡಿಲು...! ಕಬೋರ್ಡಿನಲ್ಲಿ ನಿನ್ನ ಬಟ್ಟೆಗಳಿಲ್ಲ. ನಿನ್ನ ಸಣ್ಣ ಚೈನಿನ ವಾಚು, ಬಿಂದಿಗಳ ಪೆಟ್ಟಿಗೆ... ಊಂಹೂ... ಏನೂ ಇಲ್ಲ. ಹೊರಬಂದು ಚಪ್ಪಲಿ ಗೂಡು ನೋಡುತ್ತೇನೆ, ಅವೆಲ್ಲ ಎಂಟ್ಹತ್ತು ಜೊತೆಯ ನಿನ್ನ ಚಪ್ಪಲಿ-ಶೂಗಳೂ ಇಲ್ಲ. ಆವಾಗಲೂ ನಿನ್ನ ಮೊಬೈಲು 'ನಾಟ್ ರೀಚೆಬಲ್'... ಮೈನಡುಗಿ, ಎದೆಬಡಿತ ಹೆಚ್ಚಾಗಿ ಒಳಹೋಗಿ ಮತ್ತೆ ನನ್ನ ಸೂಟ್‌ಕೇಸ್ ತೆಗೆದುನೋಡಿದೆ, ನಮ್ಮೆಲ್ಲ ಮದುವೆಯ ಫೋಟೋ-ವಿಡಿಯೋ-ದಾಖಲಾತಿಗಳು, ಪತ್ರಗಳು, ಕಂಪ್ಲೇಂಟ್‌ಗಳು, ಊಂಹೂಂ.. ಎಲ್ಲವನ್ನೂ ಎಷ್ಟು ಚೆನ್ನಾಗಿ ಲೆಕ್ಕ ಹಾಕಿಕೊಂಡು ಗಂಟುಕಟ್ಟಿ ಒಯ್ದೆಯೇ ಹುಡುಗಿ? ಯಾರೆಲ್ಲ ಬಂದಿದ್ದರು, ನಿನ್ನನ್ನು ಲಗೇಜು ಸಮೇತ ವಾಪಸ್ಸು ಕರೆದೊಯ್ಯಲು?

ಆದರೂ ರಾತ್ರಿಯೆಲ್ಲ ಸ್ನೇಹಿತರೊಂದಿಗೆ ಬಸ್‌ಸ್ಟಾಂಡು, ರೈಲ್ವೇ ಸ್ಟೇಷನ್ನು, ನಿನ್ನ ಸ್ನೇಹಿತೆಯರ ಮನೆಗಳಿಗೆಲ್ಲ ಅಲೆದುಬಿಟ್ಟೆ... ಮಾರನೆಯ ದಿನ ಬೆಳಿಗ್ಗೆ ನಿದ್ದೆಯಿಲ್ಲದವನ ಮುಖನೋಡಿ ಪಾಪಿಯೆಂದುಕೊಂಡು ನಿನ್ನೊಬ್ಬ ಸಹೋದ್ಯೋಗಿ ಉಸುರಿಯೇಬಿಟ್ಟಳಲ್ಲ, “ಅವಳು ಅವರಮ್ಮನ ಮನೆಗೆ ಹೋಗಿದಾಳೆ”... ಅದಾದ ನಂತರವೂ ನಿನ್ನ ಮೊಬೈಲು ‘ಸ್ವಿಚ್ಡ್ ಆಫ್’ ಇಲ್ಲಾ ‘ನಾಟ್ ರೀಚೆಬಲ್’... ಒಂದೇ ವಾರಕ್ಕೆ ಕೇಸು ಬಿದ್ದೇ ಬಿಟ್ಟಿತಲ್ಲ, ‘ಕಿಡ್‌ನ್ಯಾಪ್ ಮತ್ತು ವರದಕ್ಷಿಣೆ ಕಿರುಕುಳ!’ ನಿನ್ನಪ್ಪನ ಪ್ರಕಾರ ನಾನು ನಿನ್ನಿಂದ ಬಯಸಿದ್ದ ವರದಕ್ಷಿಣೆ ಅಮೌಂಟು–ಐದು ಲಕ್ಷ! ಹ್ಹ!

ಈಗೇನು? ಮುಂದೇನು? ನನ್ನ ಬದುಕೇನು? ನಿನ್ನ ಬದುಕೇನು? ಯಾವುದಕ್ಕೂ ಉತ್ತರವಿಲ್ಲ... ಕಾಲೇಜು ಟೈಮಿನಲ್ಲಿ ನನ್ನೆಲ್ಲ ಸ್ನೇಹಿತರಿಗೆ ಬುದ್ಧಿವಾದ ಹೇಳುತಿದ್ದೆ, ‘ಈಗಲೇ ಗರ್ಲ್‌ಫ್ರೆಂಡು, ಲವ್ವು, ಮದುವೆ ಅಂತೆಲ್ಲ ತಲೆಕೆಡಿಸಿಕೊಳ್ಳುವರು ಮೂರ್ಖರು’ ಅಂತಾ. ನಿನ್ನ ನೋಡಿದ ತಕ್ಷಣ ಅನಿಸಿತಲ್ಲ, “ಗರ್ಲ್‌ಫ್ರೆಂಡು, ಲವ್ವು, ಮದುವೆಯಂತಾದರೆ ಅದು ನಿನ್ನೊಂದಿಗೇ ಅಂತ! ಈಗ ನನಗೆ ಬುದ್ಧಿವಾದ, ಸಮಾಧಾನ ಹೇಳುವ ಸರದಿ ನನ್ನ ಸ್ನೇಹಿತರದು. ಈಗ ನಿನಗೇನು ಬೇಕು? ನಿನ್ನಪ್ಪ ಅಮ್ಮಂದಿರಿಗೇನು ಬೇಕು? ಅಂದೊಮ್ಮೆ ವಿನಾಕಾರಣ ಶರಂಪರ ಜಗಳವಾಡಿದಾಗ ಅಕ್ಷರಶಃ ನಿನ್ನ ಕಾಲು ಹಿಡಿದು ಕೇಳಿದ್ದೆನಲ್ಲ ಅವೇ ಪ್ರಶ್ನೆಗಳನ್ನು ಈಗ ಮತ್ತೆ ಕೇಳ್ತಾ ಇದೀನಿ ಗೆಳತಿ, ‘ನಾನಿಲ್ಲದೇ ನೀನು ಬದುಕಬಲ್ಲೆಯಾ? ಇದು ಕೇವಲ ಒಂದೂವರೆ ವರ್ಷದ ಬದುಕೇ?’ ನನಗೆಷ್ಟು ಉತ್ಕಟವಾಗಿ ಪ್ರೀತಿಸಲು ಬರುತ್ತದೇಂತ ನಿನಗೆ ಗೊತ್ತು... ನನ್ನ ಬದುಕು ಬರಡಾದರೆ ಅಷ್ಟೇ ಉತ್ಕಟವಾಗಿ ನಿನ್ನನ್ನು ದ್ವೇಷಿಸಲಾರೆನೇ ನಾನು? ನಿನ್ನೆಲ್ಲ ಗುಣಾವಗುಣಗಳನ್ನು ಮುಚ್ಚಿಕೊಂಡ ನನಗೀಗ ಹತಾಶೆಯಲ್ಲಿ ಅವನ್ನೇ ನಿನ್ನ ಬದುಕ ಹಾಳಗೆಡುಹುವ ಅಸ್ತ್ರಗಳನ್ನಾಗಿ ಬಳಸಲಾಗುವುದಿಲ್ಲವೇನೇ ಗೆಳತಿ... ಸ್ವಲ್ಪ ತಣ್ಣಗಿನ ಮನದಿಂದ ಯೋಚಿಸು... ಕಟ್ಟಿದವಳು ನೀನು, ಕೆಡಹಿದವಳೂ ನೀನೇ... ಇನ್ನೊಂದು ತಿಂಗಳಿಗೆ ಕೋರ್ಟ್‌ನ ವಿಚಾರಣೆಯಿದೆ...